## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 7 (44) |
| ಸದಸ್ಯರ ಹೆಸರು | : | ಡಾ|| ತಳವಾರ್ ಸಾಬಣ್ಣ |
| ಉತ್ತರಿಸಬೇಕಾದ ದಿನಾಂಕ | : | 13.02.2024 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳಲ್ಲಿ ಕಡ್ಡಾಯವಾಗಿ ರಚಿಸಬೇಕಾದ ವಾರ್ಡ್ ಸಮಿತಿಗಳನ್ನು ಮತ್ತು ಏರಿಯಾ ಸಭೆಗಳನ್ನು ಸರ್ಕಾರ ಯಾವಾಗ ರಚಿಸಲಿದೆ; ವಿಳಂಬಕ್ಕೆ ಕಾರಣಗಳೇನು; | ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ವಾರ್ಡ್ ಸಮಿತಿ ಮತ್ತು ಏರಿಯಾ ಸಭೆಗಳನ್ನು ರಚನೆ ಮಾಡುವ ಕುರಿತು ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಅಧ್ಯಾಯ-3ಎ ರ ಕಲಂ 13ಎ ರಿಂದ 13ಎಲ್ ರಂತೆ ಚುನಾಯಿತ ಪ್ರತಿನಿಧಿಗಳು ಇರುವ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು ನಿಯಮಾನುಸಾರ ವಾರ್ಡ್ ಸಮಿತಿ ಮತ್ತು ಏರಿಯಾ ಸಭೆಗಳನ್ನು ರಚಿಸಬೇಕಾಗಿರುತ್ತದೆ. ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ವಾರ್ಡ್ ಸಮಿತಿ ಮತ್ತು ಏರಿಯಾ ಸಭೆ ರಚಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು, ವಿವರಗಳು ಈ ಕೆಳಕಂಡಂತಿದೆ:<br>• **ಮಂಗಳೂರು ಮಹಾನಗರಪಾಲಿಕೆಗೆ ಸಂಬಂಧಿಸಿದಂತೆ** ಈಗಾಗಲೇ ಏರಿಯಾ ಸಭೆಗಳನ್ನು ಹಾಗೂ ವಾರ್ಡ್ ಸಮಿತಿಗಳನ್ನು ರಚಿಸಿದ್ದು, ಸದರಿ ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳ ಸುಲಲಿತ ಕಾರ್ಯನಿರ್ವಹಣೆಗಾಗಿ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಕಲಂ 13ಜೆ ಪ್ರಕಾರ ಉಪನಿಯಮಗಳನ್ನು (Byelaws) ರಚಿಸುವ ಬಗ್ಗೆ ಮಾನ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಈಗಾಗಲೇ ರಚಿಸಲಾಗಿದ್ದು, ಬೈಲಾ ರಚಿಸಿದ ನಂತರ ಪರಿಷತ್ತಿನ ಅಂಗೀಕಾರ ಪಡೆದು ಏರಿಯಾ ಸಭಾ ರಚಿಸಲು ಕ್ರಮವಹಿಸಲಾಗುವುದು ಎಂದು ವರದಿ ಮಾಡಿರುತ್ತಾರೆ.<br>• **ದಾವಣಗೆರೆ ಮಹಾನಗರಪಾಲಿಕೆಗೆ ಸಂಬಂಧಿಸಿದಂತೆ** 45 ವಾರ್ಡ್‌ಗಳಲ್ಲಿ ಒಟ್ಟು 95 ಏರಿಯಾ ಸಭಾಗಳನ್ನು ಈಗಾಗಲೇ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಕಲಂ 13ಬಿ ಮತ್ತು 13ಸಿರನ್ವಯ ರಚಿಸಲಾಗಿದೆ ಹಾಗೂ 45 ವಾರ್ಡ್‌ಗಳ ಪೈಕಿ, 22 ವಾರ್ಡ್‌ಗಳಲ್ಲಿ ವಾರ್ಡ್ ಸಮಿತಿ ರಚಿಸಲಾಗಿದ್ದು, ಉಳಿದ ರುತ್ತದೆ 23 ವಾರ್ಡ್‌ಗಳಲ್ಲಿ ವಾರ್ಡ್ ಸಮಿತಿ ರಚಿಸುವ ಬಗ್ಗೆ ಕ್ರಮ ವಹಿಸಲಾಗುತ್ತಿದೆ ಎಂದು ವರದಿ ಮಾಡಿರುತ್ತಾರೆ.<br>• **ವಿಜಯಪುರ ಮಹಾನಗರಪಾಲಿಕೆಗೆ ಸಂಬಂಧಿಸಿದಂತೆ** ದಿನಾಂಕ: 09.01.2024ರಂದು ಮಹಾಪೌರರ ಮತ್ತು ಉಪಮಹಾಪೌರರ ಚುನಾವಣೆ ಜರುಗಿದ್ದು, ವಾರ್ಡ್ ಸಮಿತಿಗಳು ಮತ್ತು ಏರಿಯಾ ಸಭೆಗಳ ರಚನೆಯ ಕುರಿತು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ವರದಿ ಮಾಡಿರುತ್ತಾರೆ.<br>• **ತುಮಕೂರು ಮಹಾನಗರಪಾಲಿಕೆಗೆ ಸಂಬಂಧಿಸಿದಂತೆ** ವಾರ್ಡ್ ಸಮಿತಿಗಳನ್ನು ಈಗಾಗಲೇ ರಚಿಸಲಾಗಿದ್ದು, ಚುನಾಯಿತ ಆಡಳಿತ ಮಂಡಳಿಯ ಅವಧಿಯು ದಿನಾಂಕ: 29.01.2024ರಂದು ಮುಕ್ತಾಯಗೊಂಡಿರುವುದರಿಂದ ಏರಿಯಾ ಸಭಾಗಳನ್ನು ರಚಿಸಲಾಗಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ.<br>• **ಶಿವಮೊಗ್ಗ ಮಹಾನಗರಪಾಲಿಕೆಗೆ ಸಂಬಂಧಿಸಿದಂತೆ** ಚುನಾಯಿತ ಆಡಳಿತ ಮಂಡಳಿಯ ಅವಧಿಯು ದಿನಾಂಕ: 27.11.2023ರಂದು ಮುಕ್ತಾಯಗೊಂಡಿರುವುದರಿಂದ ಏರಿಯಾ ಸಭಾ ಹಾಗೂ ವಾರ್ಡ್ ಸಮಿತಿಗಳನ್ನು ರಚಿಸಲಾಗಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ.<br>• **ಹುಬ್ಬಳ್ಳಿ - ಧಾರವಾಡ ಮಹಾನಗರಪಾಲಿಕೆಗೆ ಸಂಬಂಧಿಸಿದಂತೆ** ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಗಳನ್ನು ಮತ್ತು ಏರಿಯಾ ಸಭೆಗಳನ್ನು ರಚಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ ಎಂದು ವರದಿ ಮಾಡಿರುತ್ತಾರೆ. |

| | | |
|---|---|---|
| | | • **ಬಳ್ಳಾರಿ ಮಹಾನಗರಪಾಲಿಕೆಗೆ ಸಂಬಂಧಿಸಿದಂತೆ** 39 ವಾರ್ಡ್‌ಗಳ ಪೈಕಿ ಕೇವಲ 09 ವಾರ್ಡ್‌ಗಳಿಗೆ ಮಾತ್ರ ಅರ್ಜಿ ಸ್ವೀಕೃತವಾಗಿದ್ದು, ಉಳಿದ ವಾರ್ಡ್‌ಗಳಲ್ಲಿ ನಿಗಧಿತ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತವಾಗದಿರುವುದರಿಂದ ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ, ನಿರ್ಣಯ ಕೈಗೊಂಡಂತೆ ಸಾರ್ವಜನಿಕ ಪತ್ರಿಕಾ ಪ್ರಕಟಣೆ ಹೊರಡಿಸಲು ಮತ್ತು ಏರಿಯಾ ಸಭಾಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ವರದಿ ಮಾಡಿರುತ್ತಾರೆ.<br><br>• **ಕಲಬುರಗಿ ಮಹಾ ನಗರಪಾಲಿಕೆಗೆ ಸಂಬಂಧಿಸಿದಂತೆ** 55 ವಾರ್ಡ್‌ಗಳ ಪೈಕಿ 842 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಉಳಿದ ವಾರ್ಡ್‌ಗಳಲ್ಲಿ ನಿಗದಿತ ಪ್ರಮಾಣದಲ್ಲಿ ಅರ್ಜಿಗಳು ಸಲ್ಲಿಕೆಯಾಗಿರುವುದಿಲ್ಲ ಹಾಗೂ ಮುಂದಿನ ಪ್ರಕ್ರಿಯೆಗಾಗಿ ಕಲಬುರಗಿ ಮಹಾನಗರಪಾಲಿಕೆ ಸಾಮಾನ್ಯ ಸಭೆಯಲ್ಲಿ ಮಂಡಿಸಲಾಗಿರುತ್ತದೆ ಮತ್ತು ಏರಿಯಾ ಸಭಾಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ವರದಿ ಮಾಡಿರುತ್ತಾರೆ.<br><br>• **ಬೆಳಗಾವಿ ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ** ಆಯಾ ವಾರ್ಡ್ ಸಮಿತಿಗಳನ್ನು ರಚಿಸಲು ಅವಶ್ಯವಿರುವ ನಿಗಧಿತ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತವಾಗದೇ ಇದ್ದ ಕಾರಣ ವಾರ್ಡ್ ಸಮಿತಿಗಳನ್ನು ರಚಿಸಲು ಸಾಧ್ಯವಾಗಿರುವುದಿಲ್ಲ ಹಾಗೂ ಏರಿಯಾ ಸಭಾಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ವರದಿ ಮಾಡಿರುತ್ತಾರೆ.<br><br>• **ಮೈಸೂರು ಮಹಾನಗರಪಾಲಿಕೆಗೆ ಸಂಬಂಧಿಸಿದಂತೆ** ವಾರ್ಡ್ ಸಮಿತಿ ರಚನೆಗೆ ಕುರಿತು ಸದಸ್ಯರನ್ನು ನಾಮ ನಿರ್ದೇಶನ ಮಾಡುವ ಮಾನದಂಡಗಳನ್ನು ರಚಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆಯ ಸ್ವೀಕೃತವಾಗಿದ್ದು, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳನ್ನೊಳಗೊಂಡಂತೆ ಚರ್ಚೆ ನಡೆಸಿ, ಅಭಿಪ್ರಾಯ ಪಡೆದು, ಸೂಕ್ತ ಮಾನದಂಡಗಳನ್ನು ರಚಿಸಲು ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಅದರಂತೆ ಪರಿಶೀಲಿಸಲಾಗುತ್ತಿದೆ. ಏರಿಯಾ ಸಭೆಗಳನ್ನು ರಚಿಸುವ ಸಂಬಂಧ ಈಗಾಗಲೇ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನಾ ಹಂತದಲ್ಲಿರುತ್ತದೆ. |
| ಆ) | ಪಾರದರ್ಶಕವಾಗಿ ನಾಗರಿಕ ಸದಸ್ಯರ ನೇಮಕ ಮಾಡುವ ಕುರಿತು ಸರ್ಕಾರ ಸೂಕ್ತ ಮಾರ್ಗಸೂಚಿಯನ್ನು ಹೊರಡಿಸುವ ನಿಟ್ಟಿನಲ್ಲಿ ಯಾವ ಕ್ರಮ ಕೈಗೊಂಡಿದೆ; | ಸ್ಥಳೀಯ ಜನಪ್ರತಿನಿಧಿಗಳು ಹಾಗೂ ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳನ್ನೊಳಗೊಂಡಂತೆ ಚರ್ಚೆ ನಡೆಸಿ, ಅಭಿಪ್ರಾಯ ಪಡೆದು, ಸೂಕ್ತ ಮಾನದಂಡಗಳನ್ನು ರಚಿಸಲು ಕ್ರಮ ಕೈಗೊಳ್ಳುವುದು ಸೂಕ್ತವಾಗಿರುವುದರಿಂದ ಅದರಂತೆ ಪರಿಶೀಲನಾ ಹಂತದಲ್ಲಿರುತ್ತದೆ. |
| ಇ) | ವಾರ್ಡ್ ಸಮಿತಿಗಳ ಮತ್ತು ಏರಿಯಾ ಸಭೆಗಳ ಸುಗಮ ವ್ಯವಹಾರ ನಿರ್ವಹಣೆಗಾಗಿ ಅಗತ್ಯವಿರುವ ಮಾರ್ಗಸೂಚಿಗಳನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮ ಜರುಗಿಸಿದೆ; | ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ, 1976 ರ ಕಲಂ 13 (ಐ) ರಲ್ಲಿ ವಾರ್ಡ್ ಸಮಿತಿಗಳ ಕರ್ತವ್ಯಗಳ ಬಗ್ಗೆ ಹಾಗೂ 13 (ಜಿ) ರಲ್ಲಿ ಏರಿಯಾ ಸಭೆಗಳ ಕರ್ತವ್ಯಗಳ ಬಗ್ಗೆ ತಿಳಿಸಲಾಗಿದೆ. ಮುಂದುವರೆದು, ವಾರ್ಡ್ ಸಮಿತಿಗಳ ಮತ್ತು ಏರಿಯಾ ಸಭೆಗಳ ಸುಗಮ ವ್ಯವಹಾರ ನಿರ್ವಹಣೆಗಾಗಿ ಉಪನಿಯಮಗಳನ್ನು ರಚಿಸಿಕೊಳ್ಳಲು ಸದರಿ ಅಧಿನಿಯಮದ ಕಲಂ 13 (ಜೆ) ರಲ್ಲಿ ಅವಕಾಶ ಕಲ್ಪಿಸಲಾಗಿದೆ. |

| | | |
|---|---|---|
| ಈ) | ರಾಜ್ಯದ ಮಹಾನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ ಭಾರತದ ಲೆಕ್ಕ ನಿಯಂತ್ರಕರು 74 ನೇ ಸಂವಿಧಾನದ ತಿದ್ದುಪಡಿ ಅನುಷ್ಠಾನ ಕುರಿತು, ಸಿಎಜಿ ವರದಿಯಲ್ಲಿ ಉಲ್ಲೇಖ ಮಾಡಿರುವ ಕುರಿತು ವಿವರಣೆ ಮತ್ತು ಅನುಪಾಲನಾ ಕ್ರಮದ ಮಾಹಿತಿ ನೀಡುವುದು? (ವರದಿಯ ವಿವರ ನೀಡುವುದು) | ರಾಜ್ಯದ ಮಹಾನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ ಭಾರತದ ಲೆಕ್ಕ ನಿಯಂತ್ರಕರು 74ನೇ ಸಂವಿಧಾನದ ತಿದ್ದುಪಡಿ ಅನುಷ್ಠಾನ ಕುರಿತು, ಸಿಎಜಿ ವರದಿಯಲ್ಲಿ ಉಲ್ಲೇಖ ಮಾಡಿರುವ ವಿವರಣೆ ಮತ್ತು ಅನುಪಾಲನಾ ಕ್ರಮದ ಮಾಹಿತಿಯು ಈ ಕೆಳಕಂಡಂತಿದೆ:<br><br>**4.2.3 ವಾರ್ಡ್ ಸಮಿತಿಗಳು**<br>ಮೂರು ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಎಲ್ಲಾ ಪೌರಸಂಸ್ಥೆಗಳಲ್ಲಿ ವಾರ್ಡ್ ಸಮಿತಿಗಳಿಗೆ ಸಂವಿಧಾನವು ಅವಕಾಶ ನೀಡುತ್ತದೆ. ಕೆಎಂಸಿ ಅಧಿನಿಯಮದ ಪರಿಚ್ಛೇದ 13 ಹೆಚ್ ಅನ್ವಯ, ಎಲ್ಲಾ ಮಹಾನಗರ ಪಾಲಿಕೆಗಳು ವಾರ್ಡ್‌ಗಳ ಸಮಿತಿಯನ್ನು ರಚಿಸಬೇಕು. ಈ ಸಂಸ್ಥೆಗಳ ಅವಧಿಯು ಕೌನ್ಸಿಲ್‌ನ ಅವಧಿಯೊಂದಿಗೆ ಸಮನಾಗಿರುತ್ತದೆ. ವಾರ್ಡ್ ಸಮಿತಿಗಳು ಪೌರಸಂಸ್ಥೆ ಮತ್ತು ನಾಗರಿಕರ ನಡುವಿನ ಸೇತುವೆಯಾಗಿ ಕಾರ್ಯ ನಿರ್ವಹಿಸುವವು ಮತ್ತು ನೆರೆಹೊರೆಯ ಆಡಳಿತದ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವವು ಹಾಗೂ ಚುನಾಯಿತ ಪ್ರತಿನಿಧಿಗಳು ಮತ್ತು ನಾಗರಿಕರ ನಡುವೆ ಬಾಂಧವ್ಯವನ್ನು ಹೆಚ್ಚಿಸಿ ಸ್ಥಳೀಯ ಮಟ್ಟದ ಯೋಜನೆಯಲ್ಲಿ ನಾಗರಿಕರ ಭಾಗವಹಿಸುವಿಕೆಗೆ ವೇದಿಕೆಯನ್ನು ಒದಗಿಸುವುದು. ನಿಧಿಯ ಹಂಚಿಕೆಗಾಗಿ ವಾರ್ಡ್ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು ಸಲ್ಲಿಸುವುದು, ನಿಗಧಿಪಡಿಸಿದ ಸೂಕ್ತವಾದ ಬಳಕೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಸಾರ್ವಜನಿಕ ಉಪಯುಕ್ತತೆಗಳ ನಿರ್ವಹಣೆ ಹಾಗೂ ನಿಗಮದ ಆಸ್ತಿಗಳನ್ನು ರಕ್ಷಿಸುವುದು ಮುಂತಾದ ಕರ್ತವ್ಯಗಳನ್ನು ಅವುಗಳು ನಿರ್ವಹಿಸಬೇಕಾಗಿತ್ತು.<br><br>ಬಿಬಿಎಂಪಿ ಹೊರತುಪಡಿಸಿ ಯಾವುದೇ ಮಹಾನಗರ ಪಾಲಿಕೆಗಳಲ್ಲಿ ವಾರ್ಡ್ ಸಮಿತಿಗಳನ್ನು ರಚಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಸ್ಥಳೀಯ ಆಡಳಿತದಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಸುಗಮಗೊಳಿಸುವ ಉದ್ದೇಶವನ್ನು ಇದು ಸೋಲಿಸಿತು. ಸಮುದಾಯದ ಭಾಗವಹಿಸುವಿಕೆಯ ಅನುಪಸ್ಥಿತಿಯು ಅಭಿವೃದ್ಧಿ ಕಾರ್ಯಗಳ ಆದ್ಯತೆ, ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯ ಮೇಲ್ವಿಚಾರಣೆ ಮಾಡದಿರುವುದು, ಸೃಜಿಸಿದ ಸ್ವತ್ತುಗಳ ಬಳಕೆ ಮತ್ತು ನಿರ್ವಹಣೆ ಇತ್ಯಾದಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.<br><br>**ಅನುಪಾಲನಾ ವರದಿ:-**<br>ಮಂಗಳೂರು ಮತ್ತು ತುಮಕೂರು ಮಹಾನಗರ ಪಾಲಿಕೆಗಳಲ್ಲಿ ವಾರ್ಡ್ ಸಮಿತಿ ರಚನೆಗೊಂಡಿರುತ್ತವೆ ಹಾಗೂ ದಾವಣಗೆರೆ ಮಹಾನಗರ ಪಾಲಿಕೆಯಲ್ಲಿನ 45 ವಾರ್ಡ್‌ಗಳ ಪೈಕಿ 22 ವಾರ್ಡ್‌ಗಳಲ್ಲಿ ವಾರ್ಡ್ ಸಮಿತಿ ರಚನೆಯಾಗಿರುತ್ತದೆ. ಕೆಲವು ಮಹಾನಗರ ಪಾಲಿಕೆಗಳಲ್ಲಿ ಅರ್ಜಿಗಳು ಸ್ವೀಕೃತವಾಗದಿರುವುದರಿಂದ ಈ ಪ್ರಕ್ರಿಯೆಯಲ್ಲಿ ವಿಳಂಬವಾಗಿರುತ್ತದೆ. ಉಳಿದ ಮಹಾನಗರ ಪಾಲಿಕೆಗಳಲ್ಲಿ ಚುನಾವಣೆ ಪ್ರಕ್ರಿಯೆ ಮುಗಿದಿದ್ದು, ವಾರ್ಡ್ ಸಮಿತಿ ಮತ್ತು ಏರಿಯಾ ಸಭಾ ರಚನೆಗಳ ಪ್ರಕ್ರಿಯೆಗೆ ಕ್ರಮವಹಿಸಲಾಗುತ್ತಿದೆ. |

**ನಅಇ 19 ಎಸಿಎಂ 2024 (ಇ)**

12/02/2024

(ಬಿ.ಎಸ್. ಸುರೇಶ)
ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು